## ಮಾತು-ಕತೆ

ಕವಿತೆ ತಾನೇ ಬೇರೇನು ಅಲ್ವಲ್ಲ ಅಂತ ಅನಿಸಿ ಸಂತೋಷವೇ ಆಗತ್ತೆ. ನಾನು ಇನ್ನು ಸ್ವಲ್ಪ ಕಾಲದ ನಂತರ ನನ್ನ ಕವಿತೆಗೆ ಕಾಪಿರೈಟ್ ಕೂಡಾ ತೆಗೆದುಬಿಡಬೇಕು ಎಂದುಕೊಂಡಿದ್ದೇನೆ.

- **ಯಶಸ್ವಿ ಕವಿತೆ ಅಂತ ಇರಲ್ಲ ಅಂತೀರ... ಆದರೆ 'ಜಾತ್ರೆಯಲ್ಲಿ ಶಿವ' ಕವನ ಬರೆದ ನಂತರ ಏಕೋ ನನ್ನ ಲೇಖನಿ ಕವಿತೆಗಾಗಿ ಹಾತೊರೆಯುತ್ತಿಲ್ಲ... ಎನ್ನುವ ಮಾತನ್ನು ನೀವೆ ಬರೆದುಕೊಳ್ಳುತ್ತೀರ. ಯಾಕೆ ಪ್ರತಿ ಕವಿಗೂ ಅವರ ಮಹತ್ವಾಕಾಂಕ್ಷಿ ಬರಹ ಬಂದ ನಂತರ ತಾತ್ಕಾಲಿಕವಾಗಿಯಾದರೂ ಈ ರೀತಿಯ ಒಂದು ಜಡತ್ವ ಬರುತ್ತದೆ?**

ಕವಿಯಾದವರಿಗೆ ಒಂದಾದರೂ ಅತ್ಯುತ್ತಮ ಅನಿಸುವ ಕವಿತೆ ಬರೆಯಬೇಕು ಅನಿಸೋದಂತೂ ನಿಜ. 'ಜಾತ್ರೆಯಲ್ಲಿ ಶಿವ' ಮತ್ತು 'ಕನಕ ಮತ್ತು ಕೃಷ್ಣ' ಎರಡೂ ನನಗೆ ಬಹಳ ಸಂತೋಷ ಕೊಟ್ಟ ಕವಿತೆಗಳು. ನಾನು ಯಾವುದೇ ಕವಿತೆಯನ್ನು ತಿದ್ದಿ ತೀಡಿ ಬರೆಯುವವಳಲ್ಲ. ಮನಸಿನಲ್ಲಿ ಒಂದು ಸರ್ತಿ ಕವಿತೆಯ ಆಕಾರ ಮೈ ತಳೆದ ಕೂಡಲೇ ಬರೆದುಬಿಡತೀನಿ. ಇವೆರಡೂ ಕವಿತೆಗಳು ಹಾಗೆ ಅನಾಯಾಸವಾಗಿ ಒದಗಿ ಬಂದವು. ಇವುಗಳನ್ನು ಬರೆಯಲು ಹತ್ತುಹನ್ನೆರಡು ನಿಮಿಷ ತೆಗೆದುಕೊಂಡಿರಬಹುದು. ನಂತರ ಏನನ್ನೂ ತಿದ್ದಿಯೂ ಇಲ್ಲ. ಇವುಗಳನ್ನು ಓದಿ ಓದುಗರು ಖುಷಿ ಪಟ್ಟರು. ನನಗೂ ಸಂತೋಷ ಆಯಿತು. ಆದರೆ ಈ ಮಾನದಂಡದ ಮೇಲೆ ಇದನ್ನು ಯಶಸ್ವಿ ಕವಿತೆ ಎನ್ನಲಾರೆ. ಯಾಕೆಂದರೆ ನಾನು ಎಲ್ಲ ಕವಿತೆಗಳನ್ನು ಇದೇ ರೀತಿಯಲ್ಲೇ ಬರೆದಿದ್ದೇನೆ.

ಇನ್ನು ಜಡತ್ವ ಯಾಕೆ ಬಂತು ಅಂದರೆ ನಾನು ಬರೆಯಬೇಕು ಅಂತ ಹಂಬಲಿಸಿರೊ ಕವಿತೆ ಇದೇ ಅಂತ ನನ್ನ ಸುಪ್ತಮನಕ್ಕೆ ಅನಿಸಿ ಒಂದು ರೀತಿಯ ಸಾರ್ಥಕ ಭಾವ ನನ್ನಲ್ಲಿ ಆವರಿಸಿರಬಹುದು. 'ಜಾತ್ರೆಯಲ್ಲಿ ಶಿವ' ಬರೆದ ನಂತರದಲ್ಲಿ ಎಷ್ಟೋ ದಿನಗಳ ಕಾಲ ನನಗೆ ಏನೂ ಬರಿಬೇಕು ಅನಿಸದೇ ಸುಮ್ಮನಾಗಿದ್ದೆ. ಸ್ವಲ್ಪ ಕಾಲದ ನಂತರ ತನಗೆ ತಾನೇ ನನ್ನ ಕೈ ಮತ್ತೆ ಲೇಖನಿ ಹಿಡಿಯಿತು.

- **ನಿಮ್ಮ ಪತಿ ನಾಗಭೂಷಣ ಅವರು ಸಾಹಿತ್ಯ ವಿಮರ್ಶಕರು ಮತ್ತು ಸಮಾಜವಾದಿಗಳು. ಈ ಅಂಶ ನಿಮ್ಮ ಕಾವ್ಯಪಯಣದಲ್ಲಿ ಬಹಳಷ್ಟು ಪ್ರಭಾವ ಬೀರಿದೆ ಎಂದು ನೀವು ಹಲವು ಕಡೆ ಹೇಳಿದ್ದೀರಿ... ಇದರಿಂದ ನೀವು ಹಲವು ಸವಾಲುಗಳನ್ನೂ ಎದುರಿಸಬೇಕಾಯಿತು ಅನಿಸತ್ತೆ ಅಲ್ವಾ?**

ಸವಾಲುಗಳಿಗಿಂತ ಜಾಸ್ತಿ ನನಗೆ ಅದರಿಂದ ಲಾಭವೇ ಆಗಿದೆ. ಸಮಾಜವಾದಿ ಪತಿಯಿಂದಾಗಿ ನನಗೆ ಸಮಾಜವಾದಿ ಸ್ನೇಹಿತರ ದೊಡ್ಡ ಬಳಗ ಸಿಕ್ಕಿತು. ಸಮಾಜವಾದಿ ಶಿಬಿರಗಳಿಗೆ ನಾಗಭೂಷಣ ಅವರು ಹೋದಲ್ಲೆಲ್ಲ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿದ್ದಾರೆ. ಸಮಾಜವಾದಿಗಳ ಸಂಗದಿಂದ ನನ್ನ ಕವಿತೆಗೆ ಸಾಮಾಜಿಕ ಆಯಾಮ ದೊರಕಿತು. ಹಾಗೆ ನೋಡಿದರೆ ನಾಗಭೂಷಣ ಅವರನ್ನು ಮದುವೆಯಾಗುವ ನಿರ್ಧಾರ ನನ್ನದೇ ಆಗಿತ್ತು. ಕೊಂಕಣಿ ಮಾತಾಡುವ ಗೌಡ ಸಾರಸ್ವತ ಕುಟುಂಬದಿಂದ ಬಂದವಳು ನಾನು. ನಮ್ಮಲ್ಲಿ ಆಗ ಬಹಳ ವರದಕ್ಷಿಣೆ ಇತ್ತು. ಅದರಿಂದ ರೋಸಿ ಹೋಗಿಬಿಟ್ಟಿದ್ದೆ. ಬಾಲ್ಯದಲ್ಲಿಯೇ ಯಾವುದೇ ಕಾರಣಕ್ಕೂ ವರದಕ್ಷಿಣೆ ಕೊಟ್ಟು ಮದುವೆಯಾಗಲ್ಲ ಎಂದು ನಾನು ನಿರ್ಧರಿಸಿದ್ದೆ. ಜಾತಿಯ ಬಗ್ಗೆ ನನಗೇನೂ ಆಕ್ಷೇಪ ಇರಲಿಲ್ಲ. ಸ್ವಜಾತಿಯವನೇ ಆದರೂ ನನ್ನ ಅಭಿರುಚಿಗೆ ತಕ್ಕ ಹುಡುಗನನ್ನು ಮದುವೆಯಾಗಬೇಕೆಂಬ ಆಸೆಯಿತ್ತು. ಎಂಟನೇ ಇಯತ್ತೆಯಿಂದಲೇ ನಾನು ಯಾವ ಮದುವೆ ಸಮಾರಂಭಕ್ಕೂ ಹೋಗುತ್ತಿರಲಿಲ್ಲ. ಅಲ್ಲಿನ ವೈಭವ, ಆಡಂಬರ ಇಷ್ಟವೇ ಆಗ್ತಿರಲಿಲ್ಲ.

ನಾಗಭೂಷಣ ಅವರನ್ನು ಮದುವೆಯಾಗುವಾಗ ನನಗೆ ಸಮಾಜವಾದದ ಪರಿಚಯ ಇರಲಿಲ್ಲ.